ಕಾಗದ ಪತ್ರಗಳ ದಾಖಲೆಗಳನ್ನು ಪರಿಶೀಲಿಸಿ, ಹಿಂದೆ ನಡೆದಿರಬಹುದಾದ ವಾಮಾಚಾರದ ಘಟನೆಗಳನ್ನು ಸರಿಯಾದ ಕ್ರಮದಲ್ಲಿ ಹೊಂದಿಸಿಕೊಂಡು, ಅರ್ಥಮಾಡಿಕೊಳ್ಳಲು ಯತ್ನಿಸಿದ್ದೇನೆ. ಆಗಿನ ಕಾನೂನಿನ ಪ್ರಕಾರ ಮರಣದಂಡನೆಗೆ ಒಳಗಾದ ಆ ನತದೃಷ್ಟ ಹೆಣ್ಣುಮಕ್ಕಳಂತೆ, ಈ ಮಾನಸಿಕ ಪ್ರಕ್ರಿಯೆಯಲ್ಲಿ ನಾನೂ ಪಾಲ್ಗೊಂಡು ಅಪಾರವಾಗಿ ನೊಂದಿದ್ದೇನೆ, ಬೆಂದಿದ್ದೇನೆ.

◆ **ವಾಮಾಚಾರದ (Witchcraft) ಬಗ್ಗೆ ನಮ್ಮಲ್ಲೂ ನೆಗೆಟಿವ್ ಆದ ಭಾವನೆಗಳಿವೆ. ಇದರ ಕುರಿತು ಸ್ವಲ್ಪ ವಿವರಿಸಬಹುದಾ?**

ಪಶ್ಚಿಮ ಮತ್ತು ಪೂರ್ವ ಎರಡೂ ಕಡೆನೂ ವಾಮಾಚಾರ ಬಹುತೇಕ ನಕಾರಾತ್ಮಕ ಅರ್ಥವನ್ನು ಪಡೆದಿದೆ. ಪಾಶ್ಚಿಮಾತ್ಯ ಸನ್ನಿವೇಶದಲ್ಲಿ ಪಾಶವೀಕರಣ ಮತ್ತು ಬಲಿಕೊಡುವ ಪ್ರಕ್ರಿಯೆಯೊಂದಿಗೆ ಅದಕ್ಕಿರುವ ಕರುಳು ಬಳ್ಳಿಯ ಸಂಬಂಧದಿಂದಾಗಿ ಈ ನಕಾರಾತ್ಮಕತೆ ಹುಟ್ಟಿದೆ. ಅದರ ಹಿಂದಿನ ಪ್ರಾಚೀನ ಅರ್ಥವನ್ನ ಗಮನಿಸಿದರೆ ವಾಮಾಚಾರ ಒಂದು ಗ್ರಾಮೀಣ ಆಚರಣೆಯಾಗಿತ್ತು. ಗಿಡಮೂಲಿಕೆ, ಹೀಲಿಂಗ್, ಹೆರಿಗೆ ಮಾಡಿಸುವುದು ಮತ್ತು ಪೇಗನ್ ನಂಬಿಕೆಗಳನ್ನು ಅದು ಒಳಗೊಂಡಿತ್ತು. ಹಲವು ಸಂದರ್ಭಗಳಲ್ಲಿ ನುರಿತ ಮಹಿಳೆಯರ ಮೂಲಕ ಸಣ್ಣ ಬುಡಕಟ್ಟು ಸಮುದಾಯಗಳಿಗೆ ಎಲ್ಲಾ ರೀತಿಯಿಂದಲೂ ಸಹಾಯ ಮಾಡುವ ಕೆಲಸವನ್ನು ಇದು ಮಾಡಿದೆ. ಮಧ್ಯಯುಗ ಮತ್ತದರ ನಂತರ Inquisitorial manual ಮತ್ತು Witch huntನ ಮೂಲಕ ಇವಿಲ್‌ನ ಸಹವಾಸ ಮತ್ತು ಇತರರಿಗೆ ಹಾನಿ ಮಾಡುವ ಮತ್ಸರುದ್ದೇಶ ವಾಮಾಚಾರಕ್ಕೆ ಸೇರ್ಪಡೆಯಾಯಿತು. ಆದರೆ ಅದರ ಮೂಲ ಅರ್ಥದಲ್ಲಿ ಅದೊಂದು ಚಿಕಿತ್ಸಾ ಪದ್ಧತಿ, ಸಂಸ್ಕಾರ, ಧಾರ್ಮಿಕ ಕ್ರಿಯಾ ವಿಧಿಗಳ ಸದುದ್ದೇಶಗಳಿಗೆ ಬಳಸುತ್ತಿದ್ದ ಆಚರಣೆಯಾಗಿತ್ತು.

◆ **ಈ ನಿಟ್ಟಿನಲ್ಲಿ, ಹೊಸ ತಲೆಮಾರಿಗೆ ಮಾದರಿ ಎನಿಸುವಂತೆ ಬರೆದ ಸ್ಪ್ಯಾನಿಷ್ ಭಾಷೆಯ ಕವಿ-ಲೇಖಕರು ಯಾರಾದರೂ ಇದ್ದಾರಾ?**

ಕುತೂಹಲದ ಸಂಗತಿಯೆಂದರೆ, ಗದ್ಯ ಮತ್ತು ಪದ್ಯ ಎರಡರಲ್ಲೂ ಮಹಿಳೆಯರೇ ನನ್ನ ರೋಲ್‌ಮಾಡೆಲ್‌ಗಳು. ನನಗೆ ಇಲ್ಲಿ ಹೇಳಲೇಬೇಕೆನಿಸುವ ಮುಖ್ಯ ಹೆಸರುಗಳು ಇಬ್ಬರದು. ಮೊದಲನೆಯವರು, ಜಾದೂ, ಟ್ಯಾರೊ ಕಾರ್ಡ್ಸ್, ಚರಿತ್ರೆ ಮತ್ತು ಸೈಕೊ ಅನಾಲಿಸಿಸ್‌ನಂತಹ ವಸ್ತು ವಿಷಯಗಳನ್ನ ತಮ್ಮ ಕಾವ್ಯದಲ್ಲಿ ಬೆರೆಸಿದ ಅರ್ಜೆಂಟೀನಾದ ಕವಯಿತ್ರಿ ಒಲ್ಗಾ ಒರೊಝ್ಕೋ. ಲ್ಯಾಟಿನ್ ಅಮೆರಿಕದ ಕಾವ್ಯ ಇತಿಹಾಸದಲ್ಲಿ ಈಕೆಯದ್ದು ಪ್ರಮುಖ ಹೆಸರು. ಮತ್ತೊಬ್ಬರು ನನ್ನದೇ ತವರೂರಿನಲ್ಲಿ ವಾಸಿಸುವ ಕೊಲಂಬಿಯಾದ ಕವಯಿತ್ರಿ ಲೂಸಿಯಾ ಎಸ್ಟ್ರಾಡಾ ಅವರದ್ದು. ಈಕೆಯನ್ನು ಖುದ್ದಾಗಿ ಭೇಟಿ ಮಾಡುವ ಅದೃಷ್ಟ ನನಗೆ ಲಭಿಸಿತ್ತು. ಆಕೆಯ ಕಾವ್ಯ ನನ್ನನ್ನು ಹೆಚ್ಚು ಆಕರ್ಷಿಸುತ್ತದೆ. ಯಾಕೆಂದರೆ ಅದೊಂದು ರೀತಿಯ Counseling ಅಂದರೆ ತೀರಾ ವೈಯಕ್ತಿಕ ವಿಚಾರಣೆ. ಮಹಿಳೆಯರ ರಾಗ-ದ್ವೇಷದ ಚರಿತ್ರೆಯೊಂದಿಗೆ ಕಾಲದುದ್ದಕ್ಕೂ ತನ್ನನ್ನು ಹೆಣೆದುಕೊಂಡಿದೆ. ಹೆಣ್ಣನ್ನು ನಮ್ಮ ನಾಗರಿಕ ಸಮಾಜ ನೋಡ ಬಯಸುವ ಒಣ ಉಪಾದಿಗಳೊಂದಿಗೆ ಬಿಡಿಸಿ, ಅವಳ ಅಂತರಾಳದ ಭಂಗಿಯೊಂದಿಗೆ ಕಟೆದು ನಿಲ್ಲಿಸಿದ್ದಾಳೆ. ಲೂಸಿಯಾ ತನ್ನ ಪದ್ಯಗಳನ್ನು ಅಮರಗೊಳಿಸುವ ಮತ್ತು ಎಲ್ಲಾ ರೀತಿಯಿಂದಲೂ ಲೋಕವನ್ನು ಹೆಣ್ಣಾಗಿಸುವ ಸಮಸ್ತ ಅನುಭವದ ಕೇಂದ್ರ ಬಿಂಬವಾಗಿಸಿದ್ದಾಳೆ.

◆ **ಅಧ್ಯಾತ್ಮದ ಆಸಕ್ತಿ ಹೇಗೆ ಶುರುವಾಯ್ತು? ಎಲ್ಲರಿಗೂ ಗೊತ್ತಿರುವ ಹಾಗೆ ಕ್ರಿಶ್ಚಿಯಾನಿಟಿ ಮತ್ತು ವಸಹಾತು ಶಾಹಿ (ಕೆಲವೊಮ್ಮೆ ಇವೆರಡೂ ಒಂದೇ ಅನ್ಸತ್ತೆ!) ಬೇರ್ಪಡಿಸಲಾಗದಂತೆ ತಳುಕು ಹಾಕಿಕೊಂಡಿರುವ ಲ್ಯಾಟಿನ್ ಅಮೆರಿಕದ ಹಿನ್ನೆಲೆಯಲ್ಲಿ ಇದನ್ನು ವಿಶ್ಲೇಷಿಸಿ..**

ಚಿಕ್ಕ ವಯಸ್ಸಿನಿಂದಲೂ ಹಲವು ರೀತಿಯ ಸಂಕಟಗಳಿಗೆ ಗುರಿಯಾಗಿ ಅವುಗಳನ್ನ ನಿಭಾಯಿಸಲೇ ಬೇಕಿದ್ದ ಅನಿವಾರ್ಯತೆ ನನ್ನಲ್ಲಿ ಅಧ್ಯಾತ್ಮದ ಹಸಿವನ್ನ ಹುಟ್ಟಿಸಿದೆ. ದೇವರು ಎಂಬ ಹೆಸರಿನ ಅಗಾಧತೆಯಲ್ಲಿ ತಾತ್ಕಾಲಿಕ ಆಶ್ರಯವೊಂದನ್ನ ಕಂಡುಕೊಂಡಿದ್ದೇನೆ. ಇದೊಂದು ಬಗೆಯ ನಿರಾಶ್ರಿತರ ಶಿಬಿರ. ಇದು ನನಗೆ ಪ್ರೀತಿ, ಕಾರುಣ್ಯ ಮತ್ತು ನಂಬಿಕೆಯನ್ನು ಮತ್ತೆ ಮತ್ತೆ ಹುಡುಕಿ ಪರೀಕ್ಷೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಭಾರತಕ್ಕೆ ನನ್ನ ಪ್ರವಾಸ ಮತ್ತು ಎಚ್. ಎಸ್. ಶಿವಪ್ರಕಾಶ್ ಎಂಬ ಪರಮ ಗುರುವಿನ ಜೊತೆಗಿನ ಸ್ನೇಹ ಇವೆಲ್ಲವನ್ನು ಇನ್ನಷ್ಟು ಬಲಪಡಿಸಿತು.